DAC – 410

# ತೃತೀಯ ಬಿ.ಎ. ಪದವಿ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್ 2012
## ಅಂಚೆ ಮತ್ತು ತೆರಪಿನ ಶಿಕ್ಷಣ
## Directorate of Distance Education
## ಕನ್ನಡ ಐಚ್ಛಿಕ ಪತ್ರಿಕೆ - ೩
## ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು
## (ಪಂಪ ಭಾರತ ಸಂಗ್ರಹ, ವಡ್ಡಾರಾಧನೆ ಮತ್ತು ಛಂದಸ್ಸು)

ಸಮಯ : 3 ಗಂಟೆಗಳು ಅಂಕಗಳು : 70/80

1. ಅ) **ಒಂದರ** ಭಾವ ಸ್ವಾರಸ್ಯವನ್ನು ಬರೆಯಿರಿ : 7

೧) ದೇವಾ ಆತಂಗಿವು ಕುತ್ತಮಲ್ಲವು ಸೇಸೆಯಿಕ್ಕಿದ ಸರುಸಪಂಗಳೊತ್ತೆ
ಸೈರಿಸಲಾಱಂ ಮತ್ತೆ ಆವಕಾಲಮುಂ ಮಾಣಿಕದ ಬೆಳಗಿನೊಳಿರ್ಪುದ
ಱಿಂದಂ ಸೊಡರ ಬೆಳಗಿಂಗೆ ಸೈರಸದೆ ಕಣ್ಣನೀರ್ ಬರ್ಕುಂ ಮತ್ತಂ
ಕಮಳನೀಳೋತ್ಪಳದೊಳ್ ವಾಸಿಸಿದಕ್ಕಿಯೊಳ್ ಪೆಱವಕ್ಕಿಯಂ ನೀವುಂ
ಬಂದೊಡೆ ಬೆರಸಿಯಟ್ಟುದು ಕೂೞುಮಪ್ಪುದಱಿಂ ವಾಸಿಸಿದಕ್ಕಿಯ ಕೂೞಿಂ
ನುಂಗುಗು ಮುೞಿದ ಕೂವಿನುಗುಮ್ಮಿಗ್ಗಮದಱಿಂದೀತಂಗೀಯವಸ್ಥೆಗಳಾ
ದುವೆನೆ ...

೨) ನಿಜದೊಳೆ ಭೂಪರೆಂಬರವಿವೇಕಿಗಳಪ್ಪರದಕ್ಕೆ ನೀಂ ಫಣಿ
ಧ್ವಜ ಕಡುಕೈದು ಕರ್ಣನನೆ ನಚ್ಚುವೆಯಪ್ಪೊಡೆ ಯುದ್ಧದೊಳ್ವೃಷ
ಧ್ವಜನುಮನಿಕ್ಕಿ ಗೆಲ್ದರಿಗನೊಳ್ ತಲೆವಟ್ಟಿದಿರಾಗಿ ನಿಂದು ಸೂ
ತಜನಿಱಿವಂ ಗಡ ಪಗೆಯನೇಂಗಳ ಪಟ್ಟಮೆ ಪಾಱಿತಿಂಬುದೇ

ಆ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : 4

ವೀರಪೂರ್ಣ, ವಾಮರಥ, ಧೃಷ್ಟದ್ಯುಮ್ನ, ಭೀಷ್ಮ.

2. **ಮೂರಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : 9

೧) ಇವರ್ ಮೂರ್ಖರೇನುಮೋದುಗಳಱಿಯರ್

೨) ಅಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡಿದಪ್ಪೆನ್

೩) ನಿಮ್ಮೊಳಗೆ ನೀಂ ಮುಳಿಯಲ್ವೇಡ

೪) ಸಾಮಾನ್ಯಮೆ ಬಗೆಯೆ ಭವತ್ಕ್ಲೇಶಪಾಶ ಪ್ರಪಂಚಂ

೫) ಪೇೞಿಮಾರ್ಗೆ ಮೆೞಿವೆಂ ಸಂಪತ್ತುಮಂ ಶ್ರೀಯುಮಂ

P.T.O.

3. **ಒಂದು** ಪ್ರಶ್ನೆಗೆ ಉತ್ತರಿಸಿ : **10**

೧) ಸುಕುಮಾರ ಸ್ವಾಮಿಯ ಕಥೆಯಲ್ಲಿ ಬರುವ ವೈನಿಕನ ಕಥೆ ಮತ್ತು ಸುಧಾಮೆಯ ಕಥೆಯ ಸ್ವಾರಸ್ಯ ಕುರಿತು ಬರೆಯಿರಿ.

೨) ವಿದ್ಯುಚ್ಚೋರ ಮತ್ತು ಯಮದಂಡರು ತಮ್ಮ ವಿದ್ಯಾಭ್ಯಾಸದ ಸಂದರ್ಭದಲ್ಲಿ ಮಾಡಿದ ಶಪಥವನ್ನು ಹೇಗೆ ಪೂರೈಸಿಕೊಂಡರು ? ವಿವರಿಸಿ.

4. **ಒಂದು** ಪ್ರಶ್ನೆಗೆ ಉತ್ತರಿಸಿ : **10**

೧) ಗುರುದ್ರೋಣಾಚಾರ್ಯರ ಸಾವಿನ ಸಂದರ್ಭವನ್ನು ಕುರಿತು ಬರೆಯಿರಿ.

೨) ಶಲ್ಯನನ್ನು ಕರ್ಣನ ಸಾರಥಿಯಾಗುವಂತೆ ಒಪ್ಪಿಸುವ ಸಂದರ್ಭ ಮತ್ತು ನಂತರದ ಪರಿಣಾಮಗಳನ್ನು ಕುರಿತು ಬರೆಯಿರಿ.

5. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **(10×2=20)**

೧) ಖ್ಯಾತ ಕರ್ನಾಟಕಗಳು ಎಂದರೇನು ? ಯಾವುವು ? ಎರಡರ ಬಗ್ಗೆ ಉದಾಹರಣೆಯೊಂದಿಗೆ ಲಕ್ಷಣವನ್ನು ವಿವರಿಸಿ.

೨) ರಗಳೆಯ ಮೂಲವನ್ನು ಚರ್ಚಿಸಿ. ಅದರ ಪ್ರಕಾರಗಳನ್ನು ಉದಾಹರಣೆಯೊಂದಿಗೆ ಪರಿಚಯಿಸಿ.

೩) ಪ್ರಾಸ–ಸಾಂಗತ್ಯ–ಪದ್ಮಗಣ ಇವುಗಳನ್ನು ಕುರಿತು ವಿವರಿಸಿ.

6. ಕೆಳಗಿನ **ಎರಡು** ಪದ್ಯಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ : **(5×2=10)**

೧) ನುಡಿದುದನೆಯ್ದೆ ತುತ್ತತುದಿಯೆಯ್ದುವಿನಂ ನುಡಿದಂಚಲಂವಲಂ

೨) ನೋಡುವ ಕಣ್ಗಳ ಸಿರಿಮಾ
ತಾಡುವ ಬಾಯ್ಗಳ ರಸಾಯನಂ ಸಂತಸದಿಂ

೩) ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರುನೀನೊಬ್ಬನೇ

7. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ (**80** ಅಂಕಗಳ ಸ್ಕೀಮ್‌ನವರಿಗಾಗಿ **ಕಡ್ಡಾಯ** ಪ್ರಶ್ನೆ) **10**

೧) ಘಟೋತ್ಕಚನ ವಧಾಪ್ರಸಂಗವನ್ನು ವಿವರಿಸಿ.

೨) ಅಗ್ನಿಭೂತಿ ಮತ್ತು ವಾಯುಭೂತಿಯರ ಗುಣ ಸ್ವಭಾವವನ್ನು ಕುರಿತು ಬರೆಯಿರಿ.